Co-operative Societies working in Kunigal Taluk.

*Q.—83. Sri ANDANAIAH (Kunigal).—

Will the Government be pleased to state:—

(*a*) the number of Co-operative societies working in Kunigal Taluk at present;

(*b*) the amount that has been advanced as loans through these societies in 1960-61 and 1961-62 (Particulars of Short Term Loans, Medium Term Loans, Long Term Loans and Produce Loans, etc., may be furnished);

(*c*) the loans which are not been repaid in time;

(*d*) what action has been taken by the concerned Department in respect of outstanding arrears?

*A.—Sri RAMAKRISHNA HEGDE (Minister for Co-operation and Development).—

(*a*) 69.

(*b*) Loans.

	Amount advanced during 1960-61 Rs.	1961-62 Rs.
Short term	6,22,610	7,56,570
Medium term	3,45,276	38,750
Produce Loan	2,10,445	71,000
Long term	1,14,968	1,79,229

(*c*) *Amount due as on 30th September* 1962.

Type of loan		Amount. Rs.
Short term	...	2,97,181
Medium term	...	84,662
Long term	...	18,247
Produce loan	...	1,56,503

(*d*) The societies have been instructed to file disputes and the amount is being recovered through execution proceedings.

ಶ್ರೀ ಅಂದಾನಯ್ಯ.—(*d*)ಗೆ ಉತ್ತರವಾಗಿ ಸೊಸೈಟಿಗಳಿಗೆ ದಾವಾ ಹಾಕಲು ನೂಚಿಸಿದೆ ಎಂದು ಹೇಳಿದ್ದೀರಿ ಈಗ ಎಷ್ಟು ದಾವಾಗಳನ್ನು ಹಾಕಿವ್ದಾರೆ ಮತ್ತು ಅಲ್ಲಿಂದೀಚೆಗೆ ಎಷ್ಟು ಹಣ ವಸೂಲಾಗಿದೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕಳೆದ ಎರಡು ಮೂರು ತಿಂಗಳಿಂದೀಚೆಗೆ 30 ಸಾವಿರಕ್ಕಿಂತ ಹೆಚ್ಚಾಗಿ ವಸೂಲಾಗಿದೆ. ಬಾಕಿ ಸಾಲಗಳನ್ನು ವಸೂಲಿ ಮಾಡಲು ಪ್ರಯತ್ನ ನಡೆಯುತ್ತಿದೆ.

ಶ್ರೀ ಅಂದಾನಯ್ಯ.—ಈ ವಸೂಲಿ ಇಷ್ಟು ತಡವಾಗಲು ಕಾರಣವೇನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ ತಡವೇನೂ ಆಗಿಲ್ಲ ಕೊಟ್ಟಿದ್ದೇ 1960-61 ಹಾಗು 1961-62ರಲ್ಲಿ ಆಗಿನಿಂದ ಈಚೆಗೆ ಹತ್ತಾರು ವರ್ಷಗಳೂ ಆಗಿಲ್ಲ. ಐದಾರು ವರ್ಷಗಳೂ ಆಗಿಲ್ಲ.

Sri T. MADIAH GOWDA.—How many persons are involved in each case?

Sri RAMAKRISHNA HEGDE.—It is very difficult to give that information now. If the Hon'ble Member wants the information, I will furnish it.

Sri G. V. GOWDA.—"Produce loan.....Rs. 1,56,503." May I know whether the Department has verified that particular marketing society has recovered this loan from the ryots?

Sri RAMAKRISHNA HEGDE.—This is the amount over-due.

Sri G. V. GOWDA.—Due for payment by the end of 0th September. It has fallen into arrears.

Sri RAMAKRISHNA HEGDE.—This amount is due from the ryots; it is not due from the society.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೀಡಿಯಂ ಟರ್ಮ್‌ಲೋನು, ಷಾರ್ಟ್‌ಟರ್ಮ್‌ಲೋನು ಎಂದು ಕೊಟ್ಟಿರುವುದರಲ್ಲಿ ಯಾವುದಾದರೂ ಲಾಂಗ್ ಟರ್ಮ್‌ಲೋನಾಗಿ ಕನ್‌ವರ್ಟ್ ಮಾಡಿದ್ದೀರಾ

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಾಗೆ ಕನ್‌ವರ್ಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

Sri G. V. GOWDA.—When the ryots who have pledged their produce, don't redeem that pledge in time, is it not open to the society to auction them?

Sri RAMAKRISHNA HEGDE.—It is possible in certain circumstances.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭತ್ತ ಕೊಂಡುಕೊಳ್ಳುವುದಕ್ಕಾಗಿ ಕೆಲವು ಮಾರ್ಕೆಟಿಂಗ್ ಸೊಸೈಟಿಗಳಿಗೆ ಸಾಲವಾಗಿ ದುಡ್ಡು ಕೊಡುತ್ತಿದ್ದಾರೆ. ಅಂತಹ ಸಾಲದ ರೂಪದಲ್ಲಿ ಕೊಟ್ಟಹಣ ಏನಾದರೂ ಬಾಕಿ ನಿಂತಿದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಜನರಿಗೆ ಸಾಲ ಕೊಟ್ಟಿರುವ ಸಂಬಂಧ ಪ್ರಶ್ನೆಯಲ್ಲ. ಸೊಸೈಟಿಗಳಿಗೆ ಸರಕಾರ ಸಾಲ ಕೊಟ್ಟಿರುವುದು ಮಾತ್ರ.

ಶ್ರೀ ಹೆಚ್. ಆರ್ ಕೇಶವಮೂರ್ತಿ.—ಸೆಂಟ್ರಲ್ ಬ್ಯಾಂಕಿನವರು ಡಿಸ್ಟ್ರಿಕ್ಟ್ ಲೆವೆಲ್ಲಿನಲ್ಲಿ ರೈತರ ನಿಕಟ ಸಂಪರ್ಕವನ್ನಿಟ್ಟುಕೊಳ್ಳುವುದಕ್ಕಾಗಿ ಈ ಸೊಸೈಟಿಗಳಿಗೆ ಸಾಲ ಕೊಡುವುದಕ್ಕೆ ಬದಲಾಗಿ ಸೆಂಟ್ರಲ್‌ಬ್ಯಾಂಕಿನ ಸಂಪರ್ಕ ಇಟ್ಟುಕೊಂಡರೆ ಈ ದೇಶದ ಎಲ್ಲ ಭಾಗದ ಜನಗಳಿಗೂ ತೊಂದರೆ ಕಡಿಮೆಯಾಗುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಅವರ ಅಭಿಪ್ರಾಯದ ಮಾತು. ಕೆಲವು ವೇಳೆ ಇದರಿಂದ ದುಷ್ಪರಿಣಾಮಗಳು ಆದರೂ ಆಗಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಉತ್ತರದಲ್ಲಿ 1960-61ನೇ ಸಾಲಿಗೆ ಇಷ್ಟು ಸಾಲಗಳು, 61-62 ನೇ ಸಾಲಿಗೆ ಇಷ್ಟು ಸಾಲಗಳು ಕೊಟ್ಟಿದೆ. ಇಷ್ಟು ಬಾಕಿಇದೆ ಎಂದು ಹೇಳಿದ್ದೀರಿ ಆದರೆ ಇಂತಹ ಲೋನಿಗಾಗಿ ತಾವು ಹಣಕೊಡುವಾಗ ಇಂತಿಷ್ಟೇ ಅವಧಿಯಲ್ಲಿ ಹಣವನ್ನು ವಾಪಸು ಕೊಡಬೇಕೆಂದು ಷರತ್ತು ಏನಾದರು ಇದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಮಾನ್ಯವಾದ ಷರತ್ತುಗಳು ಏನಿವೆಯೋ ಅದನ್ನು ನಿರ್ದಿಷ್ಟ ಪಡಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಸ್ಪೆಸಿಫಿಕ್ ಆಗಿ ಇಂತಿಷ್ಟೇ ದಿವಸದಲ್ಲಿ ಕೊಡಬೇಕೆಂದು ನಿರ್ದಿಷ್ಟವಾಗಿ ಷರತ್ತು ಹಾಕಿಲ್ಲವೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದಕ್ಕೆ ನಿರ್ದಿಷ್ಟವಾಗಿ ಒಂದುವರ್ಷದೊಳಗೆ ಕೊಡಬೇಕು ಎನ್ನುವ ಷರತ್ತಿದ್ದರೆ ಅದರಂತೆ ಕೊಡುತ್ತಾರೆ.

ಶ್ರೀ ವಿ. ಎಂ. ದೇವ್.—ಸ್ಪಾಮಿ, ಮಾನ್ಯ ಮಂತ್ರಿಗಳು ಬರುವಾಗ್ಗೆ ಪ್ರಶ್ನೋತ್ತರಗಳನ್ನು ಸ್ವಲ್ಪ study ಮಾಡಿಕೊಂಡು ಬರಬೇಕೆಂದು ಸೂಚನುತ್ತೇನೆ. ಯಾಕೆಂದರೆ ಮಹತ್ವದ ಪ್ರಶ್ನೆಗಳಿಗೆ ಸರಿಯಾದ ಏವರ ಕೊಡುವದಿಲ್ಲ.

Mr. SPEAKER.—It is a suggestion for action.